# 27

# “ನಿನ್ನ ಹೆಸರನ್ನು ಮಹಿಮೆಪಡಿಸಿಕೋ”

# (12:9-50)

ಮೂರು ಮರಗಳ ಬಗ್ಗೆ ಒಂದು ಅದ್ಭುತಕರವಾದ ಪುರಾತನ ದಂತಕಥೆಯು ಅನೇಕ ಭಾಷೆಗಳಲ್ಲಿ ಹೇಳಲ್ಪಟ್ಟಿದೆ. ಒಂದು ಪರ್ವತದ ಶಿಖರದ ಮೇಲೆ ಮೂರು ಮರಗಳು ಬೆಳೆಯುತ್ತಿದ್ದವು ಮತ್ತು ತಾವು ಬೆಳೆದಾಗ ತಾವು ಏನಾಗುವೆವೆಂಬುದರ ಬಗ್ಗೆ ಕನಸು ಕಂಡವು. ಮೊದಲನೆಯ ಮರವು ವಜ್ರಗಳ ಬಗ್ಗೆ ನೀಲಮಣಿಗಳ ಬಗ್ಗೆ ಕನಸನ್ನು ಕಂಡಿತು ಮತ್ತು ಒಂದು ದಿನ ಅಮೂಲ್ಯ ವಜ್ರಾಭರಣಗಳನ್ನಿಡುವ ಖನಿಜ ಪೆಟ್ಟಿಯಾಗಲು ಬಯಸಿತು. ಎರಡನೆಯ ಮರವು ಪ್ರಯಾಣ ಮತ್ತು ಆಶ್ಚರ್ಯಪಡುವಿಕೆಯ ಬಗ್ಗೆ ಕನಸು ಕಂಡಿತು ಮತ್ತು ಒಂದು ದಿನ ಮಹಾಸಾಗರಗಳ ಮೇಲೆ ಅರಸರನ್ನು ಕರೆದು ಕೊಂಡು ಹೋಗುವ ಸಮುದ್ರಯಾನ ಮಾಡುವ ಬಲವಾದ ಹಡಗು ಸಾಗುವದನ್ನು ಬಯಸಿತು. ಮೂರನೆಯ ಮರವು ಬೆಟ್ಟದ ತುದಿಯನ್ನು ಬಿಟ್ಟು ಹೋಗುವ ಯಾವ ವಿಚಾರ ಮಾಡಲಿಲ್ಲ. ಅದರ ಬದಲು, ತಾನಿದ್ದಲಿಯೇ ಜನರಿಗೆ ದೇವರ ಕಡೆಗೆ ತೋರಿಸುತ್ತ ನೀಟಾಗಿ, ಎತ್ತರವಾಗಿ ಬೆಳೆಯುವ ಮಹತ್ವಾಕಾಂಕ್ಷೆ ಅದಕ್ಕಿತ್ತು.

ವರ್ಷಗಳು ದಾಟಿಹೋದವು, ಮತ್ತು ಮರಗಳು ಎತ್ತರವಾಗಿ ಬಲವಾಗಿ ಬೆಳೆದವು. ಒಂದು ದಿನ ಮರಗಳನ್ನು ಕಡಿಯಲು ನೋಡುವದಕ್ಕಾಗಿ ಮೂವರು ಮರಕಡಿಯುವವರು ಬೆಟ್ಟದ ಮೇಲೆ ನಡೆದು ಬಂದರು. ಒಬ್ಬ ಮರಕಡಿಯುವವನು ಮೊದಲನೆಯ ಮರದ ಬಳಿಗೆ ಬಂದು, “ನನಗೆ ಬೇಕಾಗಿರುವ ಮರವು ಇದೇ” ಎಂದು ಹೇಳಿದನು ಮತ್ತು ಅದನ್ನು ಕಡಿದು ಹಾಕಿದನು. ಇನ್ನೊಬ್ಬ ಮರಕಡಿಯುವವನು ಎರಡನೆಯ ಮರದ ಬಳಿಗೆ ಬಂದನು, ಅದೇ ಮಾತನ್ನು ಹೇಳಿದನು ಮತ್ತು ಅದನ್ನೂ ಕಡಿದು ಹಾಕಿದರು. ಮೂರನೆಯ ಮರಕಡಿಯುವವನು ಉಳಿದ ಮರವನ್ನು ವಿಚಾರಮಾಡದೇ ಕಡಿದು ಹಾಕುವ ಮೊದಲು ತನಗೆ ಯಾವುದೇ ಹಳೆಯ ಮರವು ಸಾಕಾಗುವುದು ಎಂದು ಪಿಸುಗುಟ್ಟಿದನು.

ಮೊದಲನೆಯ ಮರವು ಒಂದು ಪೆಟ್ಟಿಗೆಯ ರೂಪದಲ್ಲಿ ಮಾಡಲ್ಪಟ್ಟಾಗ, ತಾನು ಆಭರಣದ ಖಜಾನೆಯ ಪೆಟ್ಟಿಗೆಯಾಗುವದರ ಬಗೆಗಿನ ಕನಸು ನನಸಾಗುತ್ತಿರುವುದೆಂದು ಯೋಚಿಸಿತು. ಹೀಗಿದ್ದರೂ, ಅದು ತಾನು ಸಾಮಾನ್ಯವಾದ, ಕೆಲವು ಫಾರ್ಮಿನ ಪ್ರಾಣಿಗಳು ತಿನ್ನುವದಕ್ಕೆ ಹುಲ್ಲನ್ನು ಹಾಕುವ ಒರಟಾದ ಪೆಟ್ಟಿಗೆಯಾಗಿರುವೆನೆಂದು ಬೇಗನೇ ತಿಳಿದುಕೊಂಡಿತು. ಎರಡನೆಯ ಮರವು ತಾನು ಬಲವಾದ ಹಡಗು ಆಗುವೆನೆಂದು ನಿರೀಕ್ಷೆಯು ಮುಳುಗಿ ಹೋಗುತ್ತಿರುವದನ್ನು ತಾನು ಒಂದು ಸರೋವರಕ್ಕಿಂತ ಹೆಚ್ಚು ವಿಶಾಲವಾದದ್ದರ ಮೇಲೆ ಎಂದೂ ಚಲಿಸದಂಥ ಒಂದು ಚಿಕ್ಕ ದೋಣಿಯಾಗಿ ಮಾಡಲ್ಪಟ್ಟಾಗ ಅರಿತುಕೊಂಡಿತು. ಮೂರನೆಯ ಮರವು ಎಲ್ಲಕ್ಕಿಂತ ಹೆಚ್ಚು ಕೆಟ್ಟದ್ದಾದ ಅನುಭವವಾಗಿತ್ತು. ಅದು ತೊಲೆಯಾಗಿ ಕಡಿಯಲ್ಪಟ್ಟು ಇತರ ತೊಲೆಗಳೊಂದಿಗೆ ಒಟ್ಟಲ್ಪಟ್ಟು, ಮರೆಯಲ್ಪಟ್ಟಿತು.

ಸಮಯವು ದಾಟಿದಂತೆ, ಮೂರು ಮರಗಳಿಗೆ ಭಿನ್ನವಾದ ಅನುಭವಗಳಾಗಿದವು. ಪೆಟ್ಟಿಗೆಯಾಗಿ ಮಾಡಲ್ಪಟ್ಟಿದ್ದು ಒಂದು ರಾತ್ರಿಯಲ್ಲಿ ಅದೇ ಆಗ ಜನಿಸಿದ ತಮ್ಮ ಮಗುವಿಗಾಗಿ, ಯುವ ದಂಪತಿಗಳಿಂದ ಉಪಯೋಗಿಸಲ್ಪಟ್ಟಿತು; ಅವರಿಗೆ ಛತ್ರದಲ್ಲಿ ಸ್ಥಳವು ಸಿಕ್ಕಿರಲಿಲ್ಲ. ಗೋದಲಿಯು ಆಗಲೇ ಜನಿಸಿದ ಶಿಶುವನ್ನು ಹಿಡಿದು ಕೊಂಡಿರುವಂತೆ, ಮರವು ಜಗತ್ತಿನಲ್ಲಿ ಅತೀ

ದೊಡ್ಡ ನಿಧಿಯನ್ನು ಹಿಡಿದು ಕೊಂಡಿರುವೆನೆಂಬುದನ್ನು ಗ್ರಹಿಸಿಕೊಂಡಿತು. ದೋಣಿಯಾದ ಮರವು, ಒಂದು ರಾತ್ರಿಯಲ್ಲಿ ಸರೋವರ ಮೇಲೆ ಬಿರುಗಾಳಿಯ ಮುಖಾಂತರ ಜನರ ಒಂದು ಗುಂಪನ್ನು ಒಯ್ಯುವದರಲ್ಲಿ ಪ್ರಯಾಸ ಪಡುತ್ತಿತ್ತು. ದೋಣಿಯು ಮುಳುಗುವುದು ಮತ್ತು ಅದು ಒಯ್ಯುತ್ತಿದ್ದ ಪ್ರತಿಯೊಬ್ಬರನ್ನೂ ಕಳೆದು ಕೊಳ್ಳುವೆನು ಎಂದು ಭಯಪಡುತ್ತಿದಾಗ, ದೋಣಿಯು ನಿದ್ರಿಸುತ್ತಿದ್ದ ಪ್ರಯಾಣಿಕನು ಎಚ್ಚರಗೊಂಡು. ಬಿರುಗಾಳಿಗೆ "ಸುಮ್ಮನಿರು! ಮೊರೆಯಬೇಡ" ಎಂದು ಹೇಳಿದಾಗ ಚಕಿತಗೊಂಡಿತು. ಸರೋವರವು ತಕ್ಷಣವೇ ಶಾಂತವಾದಾಗ! ತಾನು ಅರಸರ ಅರಸನನ್ನು ಒಯ್ಯುತ್ತಿದ್ದೇನೆಂದು ಮರವು ಅರ್ಥಮಾಡಿಕೊಂಡಿತು. ಮೂರನೆಯ ಮರವು ಒಂದು ದಿನ ದಿಮ್ಮಿಗಳ ರಾಶಿಯೊಳಗಿಂದ ಎಳೆಯಲ್ಪಟ್ಟು ಒಬ್ಬ ಮನುಷ್ಯನು ರಕ್ತ ಸುರಿಯುತ್ತಿದ್ದ ಬೆನ್ನ ಮೇಲೆ ಇಡಲ್ಪಟ್ಟಿತು. ಆತನು ಬೀದಿಗಳಲ್ಲಿ ನಡಿಸಲ್ಪಡುತ್ತಿದ್ದನು, ಆತನ ಸುತ್ತಲೂ ಆತನ ಮರಣಕ್ಕಾಗಿ ಕೂಗುತ್ತಿದ್ದ ದ್ವೇಷಿಸುತ್ತಿದ್ದ ಜನರ ಗುಂಪು ಇತ್ತು. ಪಟ್ಟಣದ ಹೊರಗೆ, ಹೋದಾಗ, ಆ ಮನುಷ್ಯನು ಮರಕ್ಕೆ ಜಡಿಯಲ್ಪಟ್ಟು ಸಾಯಲು ಎತ್ತಲ್ಪಟ್ಟನು. ಇದಾಗುತ್ತಿದ್ದಾಗ, ಮೂರನೆಯ ಮರವು ಹೃದಯದಲ್ಲಿ ನೊಂದುಕೊಂಡಿತು, ಯಾಕಂದರೆ ಈ ಮನುಷ್ಯನಿಗೆ ಮಾಡಲ್ಪಟ್ಟ ಭಕ್ತಿಹೀನ ಕಾರ್ಯಕ್ಕಿಂತ ಹೆಚ್ಚಾದದ್ದನ್ನು ಅದು ಯೋಚಿಸಲಾರದ್ದಾಗಿತ್ತು. ಅದು ತಾನು ಮಾಡಬೇಕಾದದ್ದೆಲ್ಲವೂ ಜನರನ್ನು ದೇವರ ಕಡೆಗೆ ತೋರಿಸುವಂಥದ್ದಾಗಿತ್ತು. ಮೂರು ದಿನಗಳ ನಂತರ, ಜಗತ್ತು ಬದಲಾಯಿತು: ಆ ಮನುಷ್ಯನು ಸತ್ತವರೊಳಗಿಂದ ಎದ್ದು ಬಂದನು, ಮತ್ತು ಮೂರನೆಯ ಮರವು ಜನರು ಅದರ ಕಡೆಗೆ ನೋಡುವಾಗಲೆಲ್ಲಾ, ಆ ಸಮಯದಿಂದ ಮುಂದೆ, ಅವರು ದೇವರ ಬಗ್ಗೆ ಯೋಚಿಸುವರು ಎಂದು ತಿಳಿದು ಕೊಂಡಿತು. ಮೂರು ಮರಗಳು ಭಿನ್ನವಾದ ನಿರೀಕ್ಷೆಗಳೊಂದಿಗೆ ಮತ್ತು ಕನಸುಗಳೊಂದಿಗೆ ದೇವರಿಗೆ ಮಹಿಮೆಯನ್ನು ತಂದವು.

"ಮಹಿಮೆ" ನಾವು ಈಗಾಗಲೇ ನೋಡಿದಂತೆ, ಯೋಹಾನನ ಸುವಾರ್ತೆಯಲ್ಲಿ ಮಹತ್ವದ ಪ್ರಸ್ತಾಪವಾಗಿದೆ. ಯೋಹಾನನು ಹೀಗೆ ಬರೆದಿರುವಲ್ಲಿ, ಈ ಸುವಾರ್ತೆಯಲ್ಲಿ ಮೊದಲು ನಾವು ಅದನ್ನು ಸಂದರ್ಶಿಸಿದ್ದೇವೆ: "ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು" (1:14). "ಮಹಿಮೆ ಪಡಿಸು" ಎಂಬ ಕ್ರಿಯಾಪದವು ಯೋಹಾನನಲ್ಲಿ ಇಪ್ಪತ್ತೂಮೂರು ಸಲ ಬರುತ್ತದೆ. ಮತ್ತು "ಮಹಿಮೆ" ಎಂಬ ನಾಮ ಪದವು ಹದಿನೆಂಟು ಸಲ ಕಂಡು ಬರುತ್ತದೆ. ಸಹಜ ವಾಗಿ, ಯೇಸುವಿನ ಜೀವನದ ಯೋಹಾನನ ದಾಖಲೆಯು ಮಹಿಮೆಯ ಮೇಲೆ ಕೇಂದ್ರೀಕರಿಸುತ್ತದೆ!

## ದೇವರ ಮಹಿಮೆ ಮತ್ತು ಯೇಸು

ನಮ್ಮ ಪಠ್ಯವು ಪ್ರಾರಂಭಿಸುವಂತೆ, ಯೆರೂಸಲೇಮು ಪಸ್ಕ ಹಬ್ಬದ ಬಗ್ಗೆ ಕುತೂಹಲದಿಂದ ಚಲನವಲನ ಹೊಂದುವದನ್ನು ಮತ್ತು ಜನ ಸಮೂಹಗಳು ಯೇಸುವಿನ ಆಗಮನವನ್ನು ನಿರೀಕ್ಷಿಸುವದನ್ನು ಕಂಡುಕೊಳ್ಳುತ್ತೇವೆ. ಆತನು ಹೇಗೆ ಬರುವನು? ಆತನು ಏನು ಮಾಡುವನು? ಈಗ ಆತನು ಬಹಳ ಸಮಯದಿಂದ ನಿರೀಕ್ಷಿಸುತ್ತಿದ್ದ ಮೆಸ್ಸಿಯನೆಂದು ಪ್ರಕಟಿಸುವ ಮತ್ತು ಇಸ್ರಾಯೇಲಿನ ಅರಸನಾಗುವ ಸಮಯ ಬಂದಿರುವುದೋ? ಪ್ರತಿಯೊಬ್ಬರೂ ಯೇಸುವಿನ ಬಗ್ಗೆ ಮಾತಾಡುತ್ತಿರುವರು.

ಯೆರೂಸಲೇಮಿನೊಳಗೆ ಯೇಸುವಿನ ಪ್ರವೇಶಕ್ಕಾಗಿ ದಿನವು ಬಂದಾಗ, ಒಂದು ದೊಡ್ಡ ಜನ ಸಮೂಹವು ಆತನು ಪಟ್ಟಣವನ್ನು ಸಮೀಪಿಸಿದಂತೆ, ಆತನನ್ನು ಸಂದರ್ಶಿಸಲು ಹೋಯಿತು. ಖರ್ಜೂರದ ಗರಿಗಳನ್ನು ಅಲ್ಲಾಡಿಸುತ್ತ "ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ; ಇಸ್ರಾಯೇಲಿನ ಅರಸನಿಗೆ ಆಶೀರ್ವಾದ" (12:13). ಎಂದು ಆರ್ಭಟಿಸುತ್ತ

ಯೇಸುವಿಗೆ ಅರಸನ ಸ್ವಾಗತ ಕೊಟ್ಟರು. ಜೆಕರ್ಯ 9:9ರಲ್ಲಿ ಪ್ರವಾದನೆಯನ್ನು ನೆರವೇರಿಸುತ್ತ, ಯೇಸುವು ಕತ್ತೆಮರಿಯ ಬೆನ್ನ ಮೇಲೆ ಕೂತು ಕೊಂಡು ಯೆರೂಸಲೇಮಿನೊಳಗೆ ಹೋದನು. ಯೇಸುವಿನ ಶಿಷ್ಯರು ಇಡೀ ದೃಶ್ಯದಿಂದ ಗಲಿಬಿಲಿಗೊಂಡರು ಮತ್ತು "ಯೇಸುವಿನ ಮಹಿಮೆ ಪಡಿಸಲ್ಪಡುವವರೆಗೆ" ಏನು ಸಂಭವಿಸುತ್ತದೆಂಬುದರ ಅರ್ಥವನ್ನು ಗ್ರಹಿಸಿಕೊಳ್ಳಲಿಲ್ಲ ಎಂದು ಯೋಹನನು ದಾಖಲೆ ಮಾಡಿದ್ದಾನೆ (ಯೋಹಾನ 12:16). ಮಹಿಮೆಯು ಯೇಸುವಿನ ಜೀವನದ ಪ್ರತಿಯೊಂದು ಹಂತದಲ್ಲಿ ಆದರೆ ಶಿಲುಬೆಯಲ್ಲಿ ಹೆಚ್ಚು ಪ್ರಕಾಶಮಾನವಾಗಿ ಪ್ರತಿಬಿಂಬಿಸಲ್ಪಟ್ಟದ್ದನ್ನು ನೋಡುತ್ತೇವೆ. ಜಗತ್ತು ಯಾವಾಗಲೂ ಮಹಿಮೆಯನ್ನು ಅಧಿಕಾರ, ಕೀರ್ತಿ ಮತ್ತು ಐಶ್ವರ್ಯದೊಂದಿಗೆ ಸಂಬಂಧಿಸಲ್ಪಟ್ಟಿರುವಾಗ, ದೇವರ ಮಹಿಮೆಯು ಪ್ರೀತಿ, ದೀನತೆ ಮತ್ತು ಶಿಲುಬೆಯ ತ್ಯಾಗದಲ್ಲಿ ಅತೀ ಹೆಚ್ಚು ಸ್ಪಷ್ಟವಾಗಿ ಕಂಡು ಬರುತ್ತದೆ.

ಕೆಲವು ಗ್ರೀಕರು[1] ಫಿಲಿಪ್ಪನಿಗೆ, "ಅಯ್ಯಾ, ಯೇಸುವನ್ನು ನೋಡಬೇಕೆಂದಿದ್ದೇವೆ" ಎಂದು ಹೇಳಿದರು (12:21). ಪಿಲಿಪ್ಪನು ಅಂದ್ರೆಯನ ಬಳಿಗೆ ಹೋದನು, ಮತ್ತು ಅವರಿಬ್ಬರು ಗ್ರೀಕರು ಹೇಳಿದ್ದನ್ನು ಯೇಸುವಿಗೆ ತಿಳಿಸಿದರು, "ಮನುಷ್ಯ ಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ ಸಮಯ ಬಂದಿದೆ" ಎಂದು ಯೇಸು ಉತ್ತರ ಕೊಟ್ಟನು (ಯೋಹಾನ 12:23). ಪುನಃ, "ಮಹಿಮೆ" ಎಂದು ಹೇಳಿದ್ದು ಶಿಲುಬೆಗೆ ಉಲ್ಲೇಖವಾಗಿದೆ. ಇದು ಮುಂದಿನ ವಚನಗಳಲ್ಲಿ, ಯೇಸುವು ಹೇಗೆ ಭೂಮಿಯಲ್ಲಿ ಗೋದಿಯ ಕಾಳು ಬಿದ್ದು, ಅದು ಫಲವನ್ನು ಕೊಡುವ ಮೊದಲು ಸಾಯುವದೆಂಬುದನ್ನು ವಿವರಿಸಿದ್ದರಲ್ಲಿ ಸ್ಪಷ್ಟವಾಗುತ್ತದೆ. ತನ್ನ ಸ್ವಂತ ಶಿಲುಬೆಗೆ ಹಾಕಲ್ಪಡುವಿಕೆಯ ಬಗ್ಗೆ ಮಾತಾಡುತ್ತಿರುವಾಗ, ಯೇಸುವು ತನ್ನ ಶಿಷ್ಯರನ್ನು ಭಕ್ತಿಯ ಮತ್ತು ತ್ಯಾಗದ ತನ್ನ ಉದಾಹರಣೆಯನ್ನು ಅನುಸರಿಸಬೇಕೆಂದು ಕರೆದನು. ಅವರು ಹಾಗೆ ಮಾಡಿದರೆ, ತಂದೆಯು ಅವರನ್ನು ಗೌರವಿಸುವನೆಂದು ಸೂಚಿಸಿದನು.

ಹಿಂದಿನ ವಚನಗಳಲ್ಲಿಯ ಸಂಭಾಷಣೆಯು ವಚನ 28ರಲ್ಲಿ ಪ್ರಾರಂಭವಾಗಿ, ಯೇಸುವಿನ ಪ್ರಾರ್ಥನೆಯಲ್ಲಿ ಹರಿದು ಬರುತ್ತದೆ: "ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ." ಇದಕ್ಕೆ ಪರಲೋಕದಿಂದ ಒಂದು ವಾಣಿಯು, "ಮಹಿಮೆಪಡಿಸಿದ್ದೇನೆ, ತಿರಿಗಿ ಮಹಿಮೆ ಪಡಿಸುವೆನು" ಎಂದು ಉತ್ತರ ಕೊಟ್ಟಿತು (12:28). ಗುಂಪಿನಲ್ಲಿದ್ದ ಕೆಲವರು ಗುಡುಗಿತು ಎಂದು ತಿಳಿದು ಕೊಂಡರು. ಇತರರು ದೇವದೂತನ ಸ್ವರವನ್ನು ಕೇಳಿದ್ದೇವೆಂದು ಹೇಳಿದರು. ಯೇಸುವು ಅವರಿಗೆ ಅವರ ನಿಮಿತ್ತವಾಗಿ ಮಾತನಾಡಿದ ಒಂದು ಸ್ವರವನ್ನು ಅವರು ಕೇಳಿದರೆಂದು ಹೇಳಿದನು. ನಿಜವಾಗಿಯೂ ತಂದೆಯು ಮಾತಾಡಿದ್ದನು ಆತನು ಉಲ್ಲೇಖಿಸಿದ್ದ ಮಹಿಮೆಯು ಪುನಃ, ಪ್ರಾಥಮಿಕವಾಗಿ ಶಿಲುಬೆಯಾಗಿತ್ತು. ಯೇಸುವು ತನ್ನ ಜೀವಿತದಲ್ಲಿ ತಾನು ಹೇಳಿದ ಮತ್ತು ಮಾಡಿದ ಪ್ರತಿಯೊಂದರಿಂದ ತಂದೆಯನ್ನು ಮಹಿಮೆ ಪಡಿಸಿದ್ದನು, ಆದರೆ ಅತೀ ದೊಡ್ಡ ಮಹಿಮೆಯು ಇನ್ನೂ ಕೆಲವೇ ದಿನಗಳಲ್ಲಿ, ಯೇಸುವು ಶಿಲುಬೆಗೆ ಹಾಕಲ್ಪಟ್ಟು, ಸತ್ತವರೊಳಗಿಂದ ಎಬ್ಬಿಸಲ್ಪಡುವಾಗ ಕಂಡು ಬರುವುದು. "ಆದರೆ ನಾನು, ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳೆದುಕೊಳ್ಳುವೆನು" (12:32) ಎಂದು ಆತನು ಹೇಳಿದಂತೆ ಆತನು ಶಿಲುಬೆಗೆ ಉಲ್ಲೇಖಿಸುತ್ತಿದ್ದನೆಂದು ಯೇಸುವು ಸ್ಪಷ್ಟಪಡಿಸಿದನು. "ಈ ಮಾತಿನಿಂದ ತಾನು ಇಂಥ ಸಾವು ಸಾಯತಕ್ಕವನು ಎಂದು ಸೂಚಿಸಿದನು" (12:33) ಎಂದು ಯೋಹಾನನು ವ್ಯಾಖ್ಯಾನಿಸಿದನು.

ಆಗ ಜನರು ತಾವು "ಧರ್ಮ ಶಾಸ್ತ್ರದಲ್ಲಿ ಕೇಳಿದ್ದರ" ಬಗ್ಗೆ ಯೇಸುವಿಗೆ ಒಂದು ಪ್ರಶ್ನೆಯನ್ನು ಕೇಳಿದರು (12:34). ನೂರಾರು ವರ್ಷಗಳ ಮೊದಲು, ಇಸ್ರಾಯೇಲ್ಯರು ಸಿನಾಯಿ ಬೆಟ್ಟದ ಬಳಿಯಲ್ಲಿ[2] ದೇವರ ಸ್ವರವನ್ನು ತಮ್ಮ ಸ್ವಂತ ಕಿವಿಗಳಿಂದ ಕೇಳಿಸಿಕೊಂಡಿದ್ದರು. ಗುಡುಗಿನಲ್ಲಿ, ಮಿಂಚಿನಲ್ಲಿ, ತುತೂರಿಯ ಶಬ್ದದಲ್ಲಿ ಮತ್ತು ತುಂಬಿಕೊಂಡದ್ದ ಹೊಗೆಯಲ್ಲಿ, ಇಸ್ರಾಯೇಲ್ಯರು ದೇವರ ಮಹಿಮೆಯ ಸ್ವಲ್ಪ ಭಾಗವನ್ನು ನೋಡಿದ್ದರು. ಈಗ, ಈ ಎಲ್ಲಾ ವರ್ಷಗಳ ನಂತರ, ಅವರು ಯೇಸುವನ್ನು ಗಮನಿಸಿದಂತೆ ಮತ್ತು ಕೇಳಿದಂತೆ ದೇವರ ಮಹಿಮೆಯನ್ನು ಇನ್ನೂ

ಹೆಚ್ಚಾಗಿ ನೋಡಿದರು. ಮೊದಲೆಂದೂ ಕಾಣಿಸಿದ್ದಕ್ಕಿಂತ ಹೆಚ್ಚಾದ ಮಹಿಮೆಯನ್ನು ಬೇಗನೇ ಯೇಸುವು ತನ್ನ ಶಿಲುಬೆಗೆ ಹಾಕಲ್ಪಡುವಿಕೆ ಮತ್ತು ಪುನರುತ್ಥಾನದಲ್ಲಿ ಪ್ರಕಟಿಸುವನೆಂಬುದನ್ನು ಅವರು ಗುರುತಿಸಲಿಲ್ಲ!

ಅರಸನಂತೆ ಸ್ವಾಗತಿಸಲ್ಪಡುವದರಿಂದ ಯೆರೂಸಲೇಮನ್ನು ಪ್ರವೇಶಿಸಿದನಂತರ ಮತ್ತು ಈ ಅಧ್ಯಾಯದಲ್ಲಿ ದಾಖಲೆಯಾದ ಮಾತುಗಳನ್ನು ಹೇಳಿದ ನಂತರ, ಯೇಸುವು ಜನರ ಗುಂಪಿನಿಂದ ಹೊರಗೆ ಹೋಗಿ ಅಡವಿಕೊಂಡನು. ಆತನು ಅವರಿಗೆ ಸತ್ಯವನ್ನು ಹೇಳಿದ್ದರಿಂದ ಮತ್ತು ಆತನು ಮಾಡಿದ ಸೂಚಕ ಕಾರ್ಯಗಳ ಮುಖಾಂತರ ತನ್ನ ಬಲವನ್ನು ತನ್ನ ಗುರುತನ್ನೂ ಪ್ರಕಟಿಸಿದ್ದರಿಂದ, ಜನರು ನಂಬದೇ ಹೋದದ್ದಕ್ಕಾಗಿ ಯೇಸುವು ನೊಂದುಕೊಂಡನು. ಯೆಶಾಯನು ಮುಂತಿಳಿಸಿದ ಈ ರೀತಿಯಲ್ಲಿ ಜನರಲ್ಲಿಯ ನಂಬಿಕೆಯ ಕೊರತೆಯನ್ನು ಯೋಹಾನನು ನೋಡಿದನು: *"ನಾವು ಕೇಳಿದ ಸಂಗತಿಯನ್ನು ಯಾರು ನಂಬಿದ್ದರು? ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು?"* (ಯೆಶಾಯ 53:1; ಒತ್ತಿ ಹೇಳಿದ್ದು ನನ್ನದು); *"ಗ್ರಹಿಸಬಾರದು ಎಂದು ತಿಳಿಸಿ, ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ಗ್ರಹಿಸಿ ನನ್ನ ಕಡೆಗೆ ತಿರುಗಿ ಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದದ ಹಾಗೆ ಈ ಜನರ ಹೃದಯಕ್ಕೆ ಕೊಬ್ಬೇರಿಸಿ ಕಿವಿಯನ್ನು ಮಂದ ಮಾಡಿ ಕಣ್ಣಿಗೆ ಅಂಟು ಬಳಿ ಎಂದು ನನಗೆ ಹೇಳಿದನು"* (ಯೆಶಾಯ 6:10; ಒತ್ತಿ ಹೇಳಿದ್ದು ನನ್ನದು). "ಯೆಶಾಯನು ಆತನ ಮಹಿಮೆಯನ್ನು ನೋಡಿದ್ದರಿಂದ ಆತನ ವಿಷಯದಲ್ಲಿ ಮಾತಾಡುತ್ತಿರುವಾಗ ಆ ಮಾತನ್ನು ನುಡಿದನು" ಎಂದು ಯೋಹಾನನು ಬರೆದನು (12:41). ಇಲ್ಲಿ ಈ ಅಧ್ಯಾಯದಲ್ಲಿ ನಾಲ್ಕನೆಯ ಸಲಕ್ಕೆ "ಮಹಿಮೆ"ಯು ಕ್ರಿಸ್ತನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನಕ್ಕೆ ಉಲ್ಲೇಖಿಸಲ್ಪಟ್ಟಿರುತ್ತದೆ.

## ದೇವರ ಮಹಿಮೆ ಮತ್ತು ನಮಗೆ

ಯೇಸುವು ಈ ಅಧ್ಯಾಯದಲ್ಲಿ ತನ್ನ ಬಗ್ಗೆ ಹಾಗೂ ದೇವರ ಮಹಿಮೆಯ ಬಗ್ಗೆ ಹೇಳಿದ್ದನ್ನು ಒಂದೂ ಗೂಡಿಸುವಾಗ, ನಮಗಾಗಿ ಒಂದು ಸ್ಪಷ್ಟವಾದ ಹಾಗೂ ನೇರವಾದ ಸಂದೇಶವನ್ನು ಮತ್ತು ಈ "ಮಹಿಮೆಯ" ವಿಷಯವು ನಮ್ಮ ಜೀವಿತಗಳಿಗೆ ಹೇಗೆ ಪರಿಣಾಮ ಮಾಡುತ್ತದೆ ಎಂಬುದನ್ನು ಕಂಡುಕೊಳ್ಳುತ್ತೇವೆ. ಯೇಸುವು ತನ್ನ ಶಿಷ್ಯರಿಗೆ, "ಮನುಷ್ಯಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ ಸಮಯ ಬಂದಿದೆ" (12:23) ಎಂದು ಹೇಳಿದನು. ಆತನು ತನ್ನ ಮರಣದ ಅಗತ್ಯತೆಯನ್ನು ವಿವರಿಸಿದನು (12:24) ಮತ್ತು ಆಗ ಹೀಗೆ ಹೇಳಿದನು.

> ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆ ಮಾಡುವವನ ನಿತ್ಯ ಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ನನ್ನ ಹಿಂದೆ ಬರಲಿ; ಮತ್ತು ಎಲ್ಲಿ ನಾನು ಇರುವೆನೋ ಅಲ್ಲಿ ನನ್ನ ಸೇವಕನು ಸಹ ಇರುವನು. ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ತಂದೆಯು ಅವನಿಗೆ ಬಹುಮಾನ ಮಾಡುವನು (12:25, 26).

ಈ ಭಾಗದಲ್ಲಿ ವಿಚಾರ ಸರಣಿಯು ಈ ರೀತಿಯಲ್ಲಿ ಇರುತ್ತದೆ: ಕ್ರಿಸ್ತನು ಮಹಿಮೆ ಪಡಿಸಲ್ಪಡಲಿಕ್ಕಿದ್ದಾನೆ. ಹೀಗಿದ್ದರೂ, ಅದು ಅರ್ಥವಾಗಲಿಕ್ಕೆ ಒಬ್ಬ ನಿರೀಕ್ಷಿಸ ಬಹದಾದ್ದಕ್ಕೆ ವಿರುದ್ಧವಾಗಿ, ಮಹಿಮೆಪಡಿಸಲ್ಪಡುವದಕ್ಕಾಗಿ ಆತನಿಗೆ ಮರಣಹೊಂದುವ ಅಗತ್ಯತೆಯಿತ್ತು. ಅದೇ ರೀತಿಯಲ್ಲಿ ಯೇಸುವಿನ ಹಿಂಬಾಲಕರು ದೇವರಿಗೆ ವಿಧೇಯರಾಗುವದಕ್ಕಾಗಿ ತಮ್ಮ

ಗರ್ವ, ಸ್ವಾರ್ಥತೆ ಮತ್ತು ಈ ಲೋಕಕ್ಕಾಗಿ ಪ್ರೀತಿಯು "ಸಾಯುವವಂತೆ" ಬಿಡುವಾಗ, ನಿತ್ಯ ಜೀವವನ್ನು ಹೊಂದಿಕೊಳ್ಳುವರು ಮತ್ತು ದೇವರ ಮಹಿಮೆಯನ್ನು ಪ್ರಕಟಿಸುವರು.

12:25, 26ರಲ್ಲಿ ಯೇಸುವು ತನ್ನ ಶಿಷ್ಯರಿಗೆ ಮಾಡಲು ಕರೆದದ್ದರ ಮತ್ತು ಅಧ್ಯಾಯದಲ್ಲಿ ಅನಂತರದಲ್ಲಿ ಗುಪ್ತ ಶಿಷ್ಯರು ಮಾಡಿದ್ದರ ಮಧ್ಯದಲ್ಲಿ ವಿಶೇಷವಾದ ವ್ಯತ್ಯಾಸವು ಕಂಡುಬರುತ್ತದೆ:

> ಆದರೂ ಹಿರೀ ಸಭೆಯವಲ್ಲಿಯೂ ಅನೇಕರು ಆತನನ್ನು ನಂಬಿದರು, ಆದರೆ ತಮಗೆ ಸಭೆಯಿಂದ ಬಹಿಷ್ಕಾರವಾದೀತೆಂದು ಫರಿಸಾಯರಿಗೆ ಅಂಜಿಕೊಂಡು ಅದನ್ನು ಜನರ ಮುಂದೆ ಹೇಳಲಿಲ್ಲ, ಯಾಕಂದರೆ ದೇವರಿಂದ ಬರುವ ಮಾನಕ್ಕಿಂತ ಮನುಷ್ಯರಿಂದ ಬರುವ ಮಾನವೇ ಅವರಿಗೆ ಇಷ್ಟವಾಗಿತ್ತು (12:42, 43).

ವಚನ 43ರಲ್ಲಿ "ಮೌನ" ಎಂದು ಎರಡು ಸಲ ಭಾಷಾಂತರಿಸಲ್ಪಟ್ಟ ಗ್ರೀಕ್ ಶಬ್ದವು *ಡೊಕ್ಸಾ* ಎಂದಿದೆ. ಅದು ಈ ಪಾಠದಲ್ಲಿ ನಾವು ಆಗಲೇ ಚರ್ಚೆಮಾಡಿದ ವಾಕ್ಯಭಾಗಗಳಲ್ಲಿ "ಮಹಿಮೆ" ಎಂದೂ ಭಾಷಾಂತರಿಸಲ್ಪಟ್ಟ ಅದೇ ಶಬ್ದವಾಗಿದೆ. ಹೇಡಿಗಳಾದ ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಗುಪ್ತವಾಗಿಟ್ಟು ಕೊಂಡರು ಎಂದು ಯೋಹಾನನು ತೋರಿಸಿದ್ದಾನೆ, ಯಾಕಂದರೆ "ಅವರು ದೇವರ ಮಹಿಮೆಗಿಂತ ಮನುಷ್ಯರ ಮಹಿಮೆಯನ್ನೇ ಹೆಚ್ಚಾಗಿ ಪ್ರೀತಿಸಿದರು." ಮನುಷ್ಯರ ಮಹಿಮೆಯು ಗರ್ವದಲ್ಲಿ, ಬಲದಲ್ಲಿ, ಸ್ವಯಂ - ಕಾಪಾಡುವುಕೆಯಲ್ಲಿ ಮತ್ತು ಸ್ವಯಂ - ಹೆಚ್ಚಿಸಿಕೊಳ್ಳುವಿಕೆಯಲ್ಲಿ ಪ್ರಕಟವಾಗುತ್ತದೆ; ದೇವರ ಮಹಿಮೆಯು ದೀವತೆಯಲ್ಲಿ, ತ್ಯಾಗದಲ್ಲಿ ಮತ್ತು ಸ್ವಾರ್ಥತ್ಯಾಗದಲ್ಲಿ ಅತ್ಯುತ್ತಮವಾಗಿ ಕಾಣುತ್ತದೆ.

ಅನಂತರ ತನ್ನ ಸುವಾರ್ತೆಯಲ್ಲಿ, ಯೋಹಾನನು, ಯೇಸುವು ಪೇತ್ರನಿಗೆ ಮಾಡಿದ ಅಸಾಮಾನ್ಯವಾದ ಪ್ರವಾದನೆಯನ್ನು ದಾಖಲೆ ಮಾಡಿದ್ದಾನೆ:

> ನಿನಗೆ ನಿಜವಾಗಿ ಹೇಳುತ್ತೇನೆ, ನೀನು ಯೌವನಸ್ಥನಾಗಿದ್ದಾಗ, ನೀನೆ ನಡುವನ್ನು ಕಟ್ಟಿಕೊಂಡು ಇಷ್ಟಬಂದ ಕಡೆಗೆ ತಿರುಗಾಡುತ್ತಿದ್ದಿ; ಆದರೆ ನೀನು ಮುದುಕನಾದಾಗ, ನಿನ್ನ ಕೈಗಳನ್ನು ಚಾಚುವಿ, ಮತ್ತೊಬ್ಬನು ನಿನ್ನ ನಡವನ್ನು ಕಟ್ಟಿಕೊಂಡು ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು (21:18).

"ಅವನು ಎಂಥಾ ಸಾವಿನಿಂದ ದೇವರನ್ನು ಮಹಿಮೆ ಪಡಿಸುವನು ಎಂಬುದನ್ನು ಆತನು ಈ ಮಾತಿನಿಂದ ಸೂಚಿಸಿದನು" (21:19) ಎಂದು ಯೋಹಾನನು ವಿವರಿಸಿದನು. ಈ ಸುವಾರ್ತೆಯ ಬೋಧನೆಗಳಲ್ಲಿ ಮಹಿಮೆ ಮತ್ತು ತ್ಯಾಗ ಇವುಗಳನ್ನು ಒಂದಾಗಿ ಕಂಡುಕೊಳ್ಳುತ್ತೇವೆ!

ಕ್ರೈಸ್ತರು ದೇವರನ್ನು ಮಹಿಮೆ ಪಡಿಸಲು ಜೀವಿಸಬೇಕಾಗಿದೆ. ನಮ್ಮ ಬಗೆಗಿನ ಪ್ರತಿಯೊಂದು ದೇವರ ಮಹಿಮೆಯನ್ನು ಪ್ರತಿಬಿಂಬಿಸುತ್ತದೆ (1 ಕೊರಿಂಥ 10:31). ವರ್ಷಗಳ ಮುಖಾಂತರ, ಅನೇಕರು ದೊಡ್ಡ ದೇವಾಲಯಗಳನ್ನು ಇಲ್ಲವೇ ಆತನ ಹೆಸರಿನಲ್ಲಿ ರಾಜ್ಯಗಳನ್ನು ಕಟ್ಟುವದರಿಂದ ದೇವರನ್ನು ಮಹಿಮೆಪಡಿಸಲು ಪ್ರಯತ್ನಿಸಿದ್ದಾರೆ. ಯೋಹಾನನ ಸುವಾರ್ತೆಯಲ್ಲಿ, ಯೇಸುವು ದೇವರ ಮಹಿಮೆಯು ಸರಳವಾದ, ದೀನತೆಯ ಕೃತ್ಯಗಳಲ್ಲಿ ಚೆನ್ನಾಗಿ ಕಂಡು ಬರುತ್ತದೆಂದು ಪುನಃ ಪುನಃ ಪ್ರದರ್ಶಿಸಿದ್ದಾನೆ. ಜಗತ್ತಿನಿಂದ ಗಮನಿಸಲ್ಪಡದೇ ಇದ್ದರೂ, ಪ್ರೀತಿಯ, ತ್ಯಾಗದ ಕೃತ್ಯಗಳಲ್ಲಿ ಒಂದು ದೇವರ ಮಹಿಮೆಯು ಚೆನ್ನಾಗಿ ಕಂಡು ಬರುತ್ತದೆ:

ತನ್ನ ಮಗುವಿಗಾಗಿ ತಾಯಿಯು ಪ್ರೀತಿಯ ಜೋಪಾಸನೆಯು ದೇವರ ಮಹಿಮೆಯನ್ನು ಪ್ರಕಟಿಸುತ್ತದೆ.

ವಯಸ್ಸಾದ ತಂದೆ ತಾಯಿಗಳ ಇಲ್ಲವೇ ನೆರೆಯವರ ಜೋಪಾಸನೆ ಮಾಡುವುದು ದೇವರ ಮಹಿಮೆಯನ್ನು ಪ್ರಕಟಿಸುತ್ತದೆ.

ತೊಂದರೆಗೊಳಗಾದ ವ್ಯಕ್ತಿಯನ್ನು ಆಲಿಸಿ ಆದರಣೆ ಕೊಡುವುದು ದೇವರ ಮಹಿಮೆಯನ್ನು ಪ್ರಕಟಿಸುತ್ತದೆ.

ನಿನ್ನ ಮದುವೆಯಲ್ಲಿ ನಂಬಿಗಸ್ಥನಾಗಿರುವುದು ಮತ್ತು ದಯೆಯಿಂದ ಇರುವುದು ದೇವರ ಮಹಿಮೆಯನ್ನು ಪ್ರಕಟಿಸುತ್ತದೆ.

ಅಗತ್ಯತೆಯಲ್ಲಿರುವ ಮನುಷ್ಯನಿಗೆ ಸಹಾಯ ಕೊಡುವುದು ದೇವರ ಮಹಿಮೆಯನ್ನು ಪ್ರಕಟಿಸುತ್ತದೆ.

ಶಾಲೆಯಲ್ಲಿ ನನಗೆ ಒಬ್ಬ ಶಿಕ್ಷಕನಿದ್ದನು. ಅವನು ಒಂದು ದಿನ ದೊಡ್ಡ ಪ್ರಸಂಗಿಗಳ ಬಗ್ಗೆ ಮಾತಾಡುತ್ತಿದ್ದನು. "ಅತೀ ದೊಡ್ಡ ಪ್ರಸಂಗಿಸುವಿಕೆಯು ಇಂದು ಮಾಡಲ್ಪಡುತ್ತಿರುವುದು, ನೀವೆಂದೂ ಹೋಗಿರದ ಸ್ಥಳಗಳಲ್ಲಿಯ ನೀವೆಂದೂ ಕೇಳಿರದ ಜನರಿಂದ" ಎಂದು ಅವನು ಹೇಳಿದನು. ಅವನ ಬಲವಾದ ವ್ಯಾಖ್ಯಾನವು ಯೇಸುವು ಯೋಹನ 12ರಲ್ಲಿ ಬೋಧಿಸುತ್ತಿದ್ದಕ್ಕೆ ಸಮೀಪವಾಗಿರುತ್ತೆಂದು ನಾನು ನಂಬುತ್ತೇನೆ!

ಆಸ್ಟ್ರೇಲಿಯನ್ ಕವಿ ವಿಕ್ಟರ್ ಡಾಲೇ ಎಂಬುವನು ಆಸ್ಪತ್ರೆಯಲ್ಲಿ ಸಾಯುತ್ತಿದ್ದ ದಿನಗಳಲ್ಲಿ ಮೃದುವಾಗಿ ಆರೈಕೆ ಮಾಡಲ್ಪಟ್ಟನು. ಅವನು ತಾನು ಸಾಯುವದಕ್ಕಿಂತ ಮೊದಲು ಮಾಡಿದ ಕೊನೆಯ ಸಂಗತಿಗಳಲ್ಲಿ ಒಂದು ನರ್ಸುಗಳಿಗೆ ಅವರ ದಯೆಗಾಗಿ ಕೃತಜ್ಞತೆ ಸಲ್ಲಿಸಿದ್ದು. "ನಮಗೆ ಉಪಕಾರ ಹೇಳಬೇಡಿರಿ ದೇವರ ಕೃಪೆಗಾಗಿ ಉಪಕಾರ ಹೇಳಿರಿ" ಎಂದು ಅವರು ಉತ್ತರಕೊಟ್ಟರು. "ಆದರೆ ನೀವು ದೇವರ ಕೃಪೆಯಲ್ಲವೋ?" ಎಂದು ಡಾಲೇ ಉತ್ತರಕೊಟ್ಟನು. ಅವನು ಸರಿಯಾಗಿ ಹೇಳಿದನೆಂದು ನಾನು ನಂಬುತ್ತೇನೆ. ಅದೇ ರೀತಿಯಲ್ಲಿ, ನೀನು ಮತ್ತು ನಾನು ದೇವರ ಮಹಿಮೆಯನ್ನು ಕಂಡುಕೊಂಡಿದ್ದೇವೆ ಹಾಗೂ ಸ್ವೀಕರಿಸಿಕೊಂಡಿದ್ದೇವೆ ಮತ್ತು ಈಗ ನಾವು ಆತನ ಮಹಿಮೆಯಾಗಿರಬೇಕಾಗಿದೆ ದೀನತೆಯ, ತ್ಯಾಗದ ಸೇವೆಯಲ್ಲಿ, ನಮ್ಮ ಜಗತ್ತಿನಲ್ಲಿ ದೇವರ ದೃಶ್ಯವಾದ ಮಹಿಮೆಯಾಗ ಬೇಕಾಗಿದೆ.

## ಮುಕ್ತಾಯ

ದೇವರಿಗಾಗಿ ಏನನ್ನು ಮಾಡಬೇಕೆಂಬುದರ ಬಗ್ಗೆ ಮೂರು ಮರಗಳಿಗೆ ಘನವಾದ ಕನಸುಗಳಿದ್ದವು. ವ್ಯಂಗೋಕ್ತಿಯಾಗಿ ಅವು ಕಡಿಯಲ್ಪಟ್ಟು ತುಂಡು ತುಂಡಾಗಿ ಮಾಡಲ್ಪಟ್ಟು, ಅನಿಶ್ಚಿತತೆಯಲ್ಲಿ ಬಿಡಲ್ಪಟ್ಟಾಗ, ಅವು ದೇವರ ಮಹಿಮೆಗಾಗಿ ಉಪಯೋಗಿಸಲ್ಪಟ್ಟವು. ಯೇಸುವು ತನ್ನ ಜೀವಿತದಲ್ಲಿ ಅದು ಸತ್ಯವಾಗಿದೆ ಎಂದು ಹೇಳದು - ಅದ ನಮ್ಮದೂ ಆಗುತ್ತದೆ. "ನಮ್ಮ ಜೀವಿತಗಳಲ್ಲಿ, ಕರ್ತನೇ, ಇಂದು ಮಹಿಮೆಯ್ನು ಹೊಂದು" ಎಂದು ಸರಳ ಪ್ರಾರ್ಥನೆಯನ್ನು ಅನುದಿನವೂ ಪ್ರರ್ಥಿಸೋಣ.

---

ಟಿಪ್ಪಣಿಗಳು

[1]ಇವರು ಬಹುಶಃ ಯೆಹೂದಿ ಧರ್ಮದ ಬೋಧನೆಗಳಿಗೆ ಆಕರ್ಷಿಸಲ್ಪಟ್ಟ "ದೇವರಿಗೆ ಭಯಪಡುವವರು" ಆಗಿದ್ದರು, ಆದರೆ ಸನ್ನತಿ ಹೊಂದಲು ಒಪ್ಪದವರೂ ಯಹೂದಿ ಧರ್ಮಕ್ಕೆ ಪೂರ್ಣವಾಗಿ ಮಾರ್ಪಡದವರೂ ಆಗಿದ್ದರು. ಆದದರಿಂದ ಅವರು ಅನ್ಯರಾಗಿ ಉಳಿದರು ಮತ್ತು

ಯೆರೂಸಲೇಮಿನಲ್ಲಿ ದೇವಾಲಯದಲ್ಲಿ ಆರಾಧಿಸಲಿಕ್ಕೆ ಬಂದಾಗ ಅವರು ಅನ್ಯರ ಅಂಗಳದಲ್ಲಿ ಮಾತ್ರ ಪ್ರವೇಶಿಸಲು ಶಕ್ತರಾಗಿದ್ದರು. "ಗ್ರೀಕರು" ಅಂದರೆ ಈ ಪರಿಚ್ಛೇದದಲ್ಲಿ ಬಹುಶಃ "ದೇವ ರಿಗೆ ಭಯಪಡುವವರು" ಎಂದರ್ಥವಾಗುತ್ತದೆ; ಗ್ರೀಸ್ ದೇಶದಿಂದ ಬಂದ ಜನರಿಗೆ ಸಂಬಂಧಿಸಿರುವದಿಲ್ಲ.
[2]ವಿಮೋಚನಕಾಂಡ 20; ಧರ್ಮೋಪದೇಶಕಾಂಡ 5:22.